## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC** 534/2025 **RW**-1

**ದಿಃ14.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ 2 ನೇ ಎದುರುದಾರ ಪರ ವಕೀಲರಾದ ಶ್ರೀ ASS ರವರಿಂದ.**

ನಾನು ನನ್ನ ವಿಚಾರಣೆಗೆ ಸಂಬಂಧಿಸಿದಂತೆ ಮುಂದುವರೆದು Letter issued to the police inspector Hubballi rural police station along with postal receipt and postal order marked as Ex.R.2. and Ex.R2(a) and Ex.R2(b), Reply given by the concerned police is marked as Ex.R 3 along with copy of PM report marked as Ex.R3(a), Office copy of letter issued to the SP Dharwad dated 07-08-2026 marked as Ex.R.4 along with track consignment number in 2 is marked as Ex.R 5 and Ex.R 6.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀಮತಿ ಪಿ ಆರ ಬಿ ರವರಿಂದ**

ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದಕ್ಕೆ ಯಾರು ಮಾಹಿತಿ ಕೊಟ್ಟರು ಎಂದರೆ ಸಾಕ್ಷಿ ನಾನೆ ಕೊಟ್ಟಿದ್ದೇನೆ ಎನ್ನುತ್ತಾರೆ. ನನಗೆ ಈ ಕೇಸನ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ, ಆದರೆ ಪೋಲೀಸ ದಾಖಲೆಗಳ ಪ್ರಕಾರ ಇದೆ ಎನ್ನುತ್ತಾರೆ. ಅಪಘಾತದ ಸಮಯದಲ್ಲಿ ನಮ್ಮ ವಿಮೆ ಹೊಂದಿರುವ ವಾಹನಕ್ಕೆ ವಿಮೆ ಹಾಗೂ ಚಾಲಕನಿಗೆ ಡಿಎಲ್ ಕೂಡಾ ಇತ್ತು ಎಂದರೆ ಸರಿ. ನಮ್ಮ ವಾಹನದ ಮೇಲೆ u/s 281, 106 BNS 2023 R/w. 134 and 187 of IMV Act ಅಡಿಯಲ್ಲಿ ಆರೋಪ ಇದೆ ಎಂದರೆ ಸಾಕ್ಷಿ ಹಾಕಿದ್ದಾರೆ ಆದರೆ ಸರಿಯಾಗಿ ತನಿಖೆ ಮಾಡದೆ ಸುಳ್ಳು ವರದಿ ಹಾಕಿರುತ್ತಾರೆ ಎನ್ನುತ್ತಾರೆ. ಸರಿಯಾಗಿ ತನಿಖೆ ಆಗಿದೇಯೋ ಇಲ್ಲವೋ ಎನ್ನುವುದನ್ನು ಗಾಡಿಯ ಚಾಲಕನಾಗಿ

ಅಥವಾ ಮಾಲೀಕರಾಗಲಿ ಹೇಳಬಹುದು ನಾವಲ್ಲಾ ಅಂದರೆ ಸಾಕ್ಷಿ ನಾವು ಹೇಳಬಹುದು ಎನ್ನುತ್ತಾರೆ. ನೀವು ಅಂತಿಮ ವರದಿಯನ್ನು ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಪ್ರಶ್ನೆ ಮಾಡಿಲ್ಲ ಆದರೆ ಹಿರಿಯ ಅಧಿಕಾರಿಗಳಿಗೆ ದೂರನ್ನು ಕೊಟ್ಟಿರುತ್ತೇವೆ ಎನ್ನುತ್ತಾರೆ. ದಿಃ26-05-2026 ರಂದು ನಾನು ಮೇಲಾಧಿಕಾರಿಗಳಿಗೆ ದೂರು ಈ ಕೇಸನ ಸಲುವಾಗಿ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದೂರಿನಲ್ಲಾಗಲಿ ಅಥವಾ ಚಾರ್ಜಶೀಟನಲ್ಲಾಗಲಿ ಅವನು ಅಪಘಾತವಾದ ತಕ್ಷಣ ಸ್ಥಳದಿಂದ ಓಡಿ ಹೋಗಿರುತ್ತಾನೆ ಎಂದು ಇದೆ ಎಂದರೆ ಸಾಕ್ಷಿ ಅದು ಸುಳ್ಳು ಇದೆ ಎನ್ನುತ್ತಾರೆ. ಸದರಿ ಚಾಲಕ ತಪ್ಪು ಇದಿದ್ದಕ್ಕೆ ಅಲ್ಲಿಂದ ಓಡಿ ಹೋಗಿರುತ್ತಾನೆ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಆ ಕಾರಣಕ್ಕೆ ಆತ ಪೋಲಿಸ ಠಾಣೆಯಲ್ಲಾಗಲಿ, ಅಥವಾ ಮಾನ್ಯ ಉಚ್ಚ ನ್ಯಾಯದಲ್ಲಾಗಲಿ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ನೀವು ಕಂಪನಿಯಿಂದ ಆತನಿಗೆ ನೋಟಿಸ ಕಳುಹಿಸಿ ಅಪಘಾತ ಹೇಗಾಯಿತು ಎಂಬುವುದರ ಬಗ್ಗೆ ಮಾಹಿತಿ ಪಡೆದಿದ್ದೀರಾ ಎಂದರೆ ಸಾಕ್ಷಿ ಮೌಖಿಕವಾಗಿ ಪಡೆದಿದ್ದೇವೆ ಎನ್ನುತ್ತಾರೆ. ನಾನು ಆ ರೀತಿ ಯಾವುದೇ ಮಾಹಿತಿ ಪಡೆದಿಲ್ಲ ಹಾಗೂ ಈ ಸಂಬಂಧ ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ದೂರಿನಲ್ಲಿ ದೂರು ಕೊಡುವುದಕ್ಕೆ ಯಾಕೆ ವಿಳಂಬವಾಗಿದೆ ಎಂಬ ಬಗ್ಗೆ ಬರೆದಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಮೃತ ವ್ಯಕ್ತಿಯ ತಪ್ಪು ಇದೆ ಎಂದು ಹೇಳಿದ್ದು ಆದರೆ ಅಂತಿಮ ವರದಿಯಲ್ಲಿ ಎಲ್ಲಿಯೂ ಕೂಡಾ ಆತನ ತಪ್ಪಿನ ವರದಿ ಇಲ್ಲ ಎಂದರೆ ಸಾಕ್ಷಿ ಅಂತಿಮ ವರದಿಯಲ್ಲಿ ಇಲ್ಲ ಆದರೆ ಆತ ಡಿಎಲ್ ಇಲ್ಲದೆ ಕುಡಿದು, ವಿಮೆ ಇಲ್ಲದೆ ಗಾಡಿ ಚಾಲನೆ ಮಾಡಿಕೊಂಡು ಬಂದಿರುತ್ತಾನೆ ಎನ್ನುತ್ತಾರೆ. ಅರ್ಜಿದಾರರು ಕೇಳಿರುವ ಪರಿಹಾರ 3rd party claim ಎಂದರೆ ಸರಿ. 3rd party claim ಎಂದರೆ ನಮ್ಮ ಕಂಪನಿಯ ವಿಮೆ ಹೊಂದಿರುವ ವಾಹನದ ತಪ್ಪು ಇರುವ ಕಾರಣ ನಾವು ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ನಮ್ಮ ಇನ್ಸೂರನ್ಸ ಪಾಲಿಸಿಯಲ್ಲಿ ನಮ್ಮ ವಿಮೆ ಹೊಂದಿರುವ ವಾಹನದ ಚಾಲಕನಿಗೆ ಡಿಎಲ್ ಇರಬೇಕು ಮತ್ತು ಇನ್ಸೂರನ್ಸ ಚಾಲ್ತಿಯಲ್ಲಿರಬೇಕು ಎಂದು ಮಾತ್ರ ಕಂಡಿಷನ ಹಾಕಿರುತ್ತೇವೆ ಎಂದರೆ ಇನ್ನು ಹಲವಾರು ಕಂಡಿಷನಗಳು ಇರುತ್ತವೆ ಎಂದು ಸಾಕ್ಷಿ ನುಡಿಯುತ್ತಾರೆ. ಇನ್ನು ಹಲವಾರು ಕಂಡಿಷನಗಳು ಇವೆ ಎಂದುಹೇಳಿದ್ದು ಅವುಗಳು 3rd party ವೈಕಲ್ ತಪ್ಪು ಇದ್ದರೆ ಕೊಡಬಾರದು ಎಂದು ಇಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ವಿಮಾ

ಪಾಲಿಸಿಯಲ್ಲಿ ನಮ್ಮ ವಾಹನಕ್ಕೆ ಡಿಎಲ್ ಹಾಗೂ ಇನ್ಸೂರನ್ಸ ಇದ್ದರೆ ಕ್ಲೇಮ ಕೊಡುತ್ತೇವೆ ಎಂದು ಹೇಳಿದ್ದರು ಕೂಡಾ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಅಂಶಗಳಿಗೆ ಸಂಬಂದಿಸಿದಂತೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸಾಕ್ಷಿ ಮಾಡಿದ್ದೇನೆ ಎನ್ನುತ್ತಾರೆ. ಕಂಪನಿಯಿಂದ ದೂರು ಕೊಟ್ಟಿರುತ್ತೇವೆ ಎಂಬ ದಾಖಲೆಗಳನ್ನು ನಾವು ಸೃಷ್ಟಿ ಮಾಡಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕ್ಲೇಮ 3rd party claim ಆಗಿರುವ ಕಾರಣ ಪರಿಹಾರವನ್ನು ನಾವೇ ಕೊಡಬೇಕೆಂದರೆ ಸರಿಯಲ್ಲ

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ